ಪಿಡಬ್ಲ್ಯೂಃ 01.

ದಿನಾಂಕಃ 18-07-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಸಿ.ಡಿ. ವಕೀಲರಿಂದಃದಿ

ಮೂರನೇ ಪ್ರತಿವಾದಿಯ ಮಕ್ಕಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕಿದೆ ಎಂದರೆ ಸರಿಯಲ್ಲಾ. ಮೂರನೇ ಪ್ರತಿವಾದಿಯನ್ನು ನಾನು ಮದುವೆಯಾಗಿಲ್ಲ ಎಂದರೆ ಸರಿಯಲ್ಲಾ. 3 ನೇ ಪ್ರತಿವಾದಿಯ ಮಕ್ಕಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಸ.ನಂಃ ಗಳು 105 ರಲ್ಲಿ ಒಟ್ಟು 5 ಎಕರೆ ಜಮೀನು ಇದೆ. ಸದರಿ ಜಮೀನು ಮೂರು ಪೋಡುಗಳು ಆಗಿವೆ. ಒಂದೊಂದು ಪೋಡಿನಲ್ಲಿ ಎಷ್ಟೆಷ್ಟು ಎಕರೆ ಇದೆ ಎಂದರೆ ನನಗೆ ಗೊತ್ತಿಲ್ಲಾ. ಒಟ್ಟಿನಲ್ಲಿ ಮೂರು ಪೋಡಾಗಳಾಗಿವೆ ಎಂದಿದ್ದಾರೆ. 1 ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ ಎರಡು ವರೆ ಎಕರೆ ಇದೆ. ಅದರ ಚಕ್ಕುಬಂದಿ ಪೂರ್ವಕ್ಕೆ ರಾಮಶೆಟ್ಟಿ ರವರು ಜಮೀನು, ಪಶ್ಚಿಮಕ್ಕೆ ವಿಷಕಂಠ ಶೆಟ್ಟಿ ರವರ ಜಮೀನು, ಉತ್ತರಕ್ಕೆ ಸುಂಡವಾಳು ರಾಮಶೆಟ್ಟಿರವರ ಜಮೀನು, ದಕ್ಷಿಣಕ್ಕೆ ಮಾರಗೌಡನಹಳ್ಳಿ ಚಂದ್ರಪ್ಪ ರವರ ಜಮೀನು. ಈ ಚಕ್ಕುಬಂದಿಯಲ್ಲಿ 2 ವರೆ ಎಕರೆ ಜಮೀನು ಇದೆ. ಪಾರ್ವತಮ್ಮನ ಹೆಸರಿನಲ್ಲಿರುವ ಜಮೀನಿನ ಸಂಬಂಧ ದಾವೆ ಹೂಡಿದ್ದೇನೆ. ಈ ದಾವೆಯಲ್ಲಿ 2 ವರೆ ಎಕರೆ ಜಮೀನು ಸೇರಿಸಿಲ್ಲ ಎಂದರೆ ಸರಿಯಲ್ಲಾ. ಪಾರ್ವತಮ್ಮ ನವರು ಸುಮಾರು 30 ವರ್ಷಗಳಿಂದ 2 ವರೆ ಎಕರೆ ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ನಾನು ದಾವೆಯಲ್ಲಿ ದಾವಾ ಐಟಂ ನಂಃ 1 ರ ಸ್ವತ್ತಿನಲ್ಲಿ 2 ವರೆ ಎಕರೆ ಬರೆಸಿಲ್ಲಾ ಮತ್ತು 1 ಎಕರೆ 28 ಗುಂಟೆ ಬರೆಸಿದ್ದೇನೆಂದರೆ ಸರಿ.

ರಾಜಶೆಟ್ಟಿರವರ ಹೆಸರಿನಲ್ಲಿ 2 ವರೆ ಎಕರೆ ಜಮೀನಿದ್ದು, ಅದರ ಚಕ್ಕುಬಂದಿ ಮೇಲೆ ಹೇಳಿರುವ ಚಕ್ಕುಬಂದಿಯಾಗಿರುತ್ತದೆ. ಐಟಂ ನಂಃ 2 ರ ಚಕ್ಕುಬಂದಿ ಐಟಂ ನಂಃ1 ಕ್ಕೆ ಸಂಬಂದಪಟ್ಟಿದ್ದು. ದಾವೆಯಲ್ಲಿ ಬರೆಸಿರುವ ಐಟಂ ನಂಃ2 ರ ಚಕ್ಕುಬಂದಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಇಲ್ಲ ಎಂದಿದ್ದಾರೆ. ಮಾರಿ ಹಾಕಿರುವ ಜಮೀನಿಗೂ ಸಹ ದಾವೆ ಹೂಡಿದ್ದೇನೆ. 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಯನ್ನು ಅವರೇ ಅನುಭವಿಸುತ್ತಿದ್ದಾರೆ. ಸಾಕ್ಷಿ ಮುಂದುವರೆದು 20 ವರ್ಷದಿಂದ 2 ನೇ ಪ್ರತಿವಾದಿಯವರು ಅನುಭಸುತ್ತಿದ್ದಾರೆ. ಮಾರಿ ಹಾಕಿರುವ ದಾವಾ ಐಟಂ ನಂಃ 1 ರ ಚಕ್ಕುಬಂದಿ ಮೇಲೆ ಹೇಳಿರುವ ಚಕ್ಕುಬಂದಿ ಆಗಿರುತ್ತದೆ. 20 ಗುಂಟೆ ಜಮೀನನ್ನು 8 ನೇ ಪ್ರತಿವಾದಿಯು 20 ವರ್ಷದಿಂದ ಅನುಭವಿಸುತ್ತಿದ್ದಾರೆ. ದಾವಾ ಐಟಂ ನಂಃ 1 ರಿಂದ 3 ನ್ನು ಹೊರೆತುಪಡಿಸಿ ಬೇರೆ ಆಸ್ತಿಯ ಮೇಲೆ ದಾವೆ ಹೂಡಿರುವುದಿಲ್ಲ. ಸಾಕ್ಷಿ ಮುಂದುವರೆದು ಮನೆಯನ್ನು ಸಹ ಸೇರಿಸಿದ್ದೇನೆ ಎಂದಿದ್ದಾರೆ. ಸದರಿ ಮನೆಯು 30 ಇಂಟು 40 ಇದೆ. ಸದರಿ ಮನೆಯ

ಚಕ್ಕುಬಂದಿ ಪೂರ್ವಕ್ಕೆ ರಾಜಶೆಟ್ಟಿ ರವರ ಮನೆ, ಪಶ್ಚಿಮಕ್ಕೆ ಪೊಸ್ಟ್ ಕಾಳಪ್ಪನ ಮನೆ, ಉತ್ತರಕ್ಕೆ ರಾಮಶೆಟ್ಟಿರವರ ಮನೆ, ದಕ್ಷಿಣಕ್ಕೆ ರೋಡ್. ಸದರಿ ಮನೆಯು ರಾಜಶೆಟ್ಟಿರವರ ಹೆಸರಿನಲ್ಲಿದೆ. ಅವರು 40 ರಿಂದ 50 ವರ್ಷದಿಂದ ಅನುಭವಿಸುತ್ತಾ ಬಂದಿದ್ದಾರೆ. ಸದರಿ ಮನೆಯು ಮೂಲತಃ ಜವರಶೆಟ್ಟಿರವರ ತಂದೆಯ ಹೆಸರಿನಲ್ಲಿತ್ತು. ಅವರ ಹೆಸರು ನನಗೆ ಗೊತ್ತಿಲ್ಲಾ. ದಾವಾ ಐಟಂ ನಂಃ 4 ಸ್ವತ್ತು ಎಷ್ಟು ವಿಸ್ತೀರ್ಣ ಇದೆ ಎಂದು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. 5 ನೇ ಐಟಂ ನ ದಾಖಲೆ ರಾಜಶೆಟ್ಟಿರವರ ಹೆಸರಿನಲ್ಲಿದೆ. ದಾವಾ ಐಟಂ ನಂಃ 5 ರ ಸ್ವತ್ತು ರಾಜಶೆಟ್ಟಿಯ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲಾ. ದಾವಾ ಐಟಂ ನಂಃ 5 ರ ವಿಸ್ತೀರ್ಣ ಮನೆಯಷ್ಟೆ ಸೈಟು ಇದೆ. ಪಾರ್ವತಮ್ಮನ ಹೆಸರಿನಲ್ಲಿ ಏನು ಇಲ್ಲ. ರಾಜಶೆಟ್ಟಿರವರ ಹೆಸರಿನಲ್ಲಿ ಮನೆ ಮತ್ತು ಸೈಟು ಇದೆ. ಪಾರ್ವತಮ್ಮ ನವರ ಹೆಸರಿನಲ್ಲಿರುವ ಆಸ್ತಿಗಳು ಈ ದಾವೆಗೆ ಸಂಬಂದಪಡುವುದಿಲ್ಲ ಎಂ -7-
ಓ.ಎಸ್. 154/2015 ದರೆ ಸರಿ. ವಂಶವೃಕ್ಷವನ್ನು ನಾನು ಹೇಳಿದ ಮೇರೆಗೆ ನಮ್ಮ ವಕೀಲರು ಬೆರಳಚ್ಚು ಮಾಡಿಸಿದ್ದಾರೆ. ವಂಶವೃಕ್ಷ ದಲ್ಲಿ ಬರೆಸಿರುವ ಹಾಗೇ ನಾನು 3 ನೇ ಪ್ರತಿವಾದಿಯ ಹೆಂಡತಿಯೆಂದು ಸುಳ್ಳು ಬರೆಸಿದ್ದೆನೆಂದರೆ ಸರಿಯಲ್ಲಾ. ವಂಶವೃಕ್ಷ ವನ್ನು ಸೃಷ್ಟಿ ಮಾಡಿಕೊಂಡು 3 ನೇ ಪ್ರತಿವಾದಿಯ ಜೊತೆ ಯಾವುದೇ ಸಂಬಂದ ಇಲ್ಲದಿದ್ದರೂ ಸಹ ಈ ದಾವೆಗೆ ಅನೂಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ. 3 ನೇ ಪ್ರತಿವಾದಿಗೆ 6 ನೇ ಪ್ರತಿವಾದಿ ಹೆಂಡತಿಯಾಗಿ ಮತ್ತು ಅನಿತಾ ಮತ್ತು ಸುನಿತಾ ಎಂಬ ಮಕ್ಕಳನ್ನು ಬಿಟ್ಟರೆ ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿಯಲ್ಲಾ. 6 ನೇ ಪ್ರತಿವಾದಿಯ ಹಿರಿಯ ಮಗಳಿಗೂ ಸಹ 15 ವರ್ಷ ಎಂದು ತೋರಿಸಿದ್ದೇವೆ ಎಂದರೆ ಸರಿ. 6 ನೇ ಪ್ರತಿವಾದಿಯ ಮಗಳು ಅನಿತಾ ರವರು ನನ್ನ ಮಗಳಿಗಿಂತ ದೊಡ್ಡವಳು ಎಂದರೆ ಸರಿಯಲ್ಲಾ. ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ದಾವೆ ಹೂಡಿದ್ದೇನೆಂದರೆ ಸರಿಯಲ್ಲಾ. ನನಗೆ ಯಾವುದೇ ಬಾಗಾಂಶಕ್ಕೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲಾ.

ಪಾಟೀಸವಾಲು 8 ನೇ ಪ್ರತಿವಾದಿಪರ ಶ್ರೀ ಎಂ.ಆರ್.ಎಲ್ ವಕೀಲರಿಂದಃ

8 ನೇ ಪ್ರತಿವಾದಿಗೆ ಕ್ರಯ ಆಗಿರುವ ಜಮೀನು 2 ನೇ ಪ್ರತಿವಾದಿ ಮತ್ತು ಅವರ ತಾಯಿ ಸಣ್ಣ ತಿಮ್ಮಮ್ಮ ರವರು 7 ನೇ ಪ್ರತಿವಾದಿಗೆ ದಿಃ 26-03-1980 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲಾ ಎಂದಿದ್ದಾರೆ. 7 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಂದರ್ಬದಲ್ಲಿ 2 ನೇ ಪ್ರತಿವಾದಿಯ ಮದುವೆ ಖರ್ಚಿಗೋಸ್ಕರ ಕ್ರಯ ಮಾಡಿರುತ್ತಾರೆಂದರೆ ಸರಿಯಲ್ಲಾ. 7 ನೇ ಪ್ರತಿವಾದಿಗೆ ಆಗಿರುವಂತಹ ಕ್ರಯ ಪತ್ರವನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಲು ತೊಂದರೆ ಇದೆ ಎಂದಿದ್ದಾರೆ. ನಾನು ದಾವೆ ಹಾಕುವ ಸಮಯದಲ್ಲಿ ನನ್ನ ಮಗಳಿಗೆ 15 ವರ್ಷ ಎಂದು

ಬರೆಸಿದ್ದು ಈಗ 18 ವರ್ಷ ಆಗಿದೆ. ನನ್ನ ಮಗಳು ಹುಟ್ಟುವ ಪೂರ್ವದಲ್ಲೆಯೇ 7 ನೇ ಪ್ರತಿವಾದಿಗೆ ಜಮೀನು ಮಾರಾಟ ಆಗಿದೆ ಎಂದರೆ ಸರಿಯಲ್ಲಾ. 7 ನೇ ಪ್ರತಿವಾದಿಗೆ ಕ್ರಯ ಆಗುವ ಸಮಯದಲ್ಲಿ ತಕರಾರು ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಕ್ರಯ ಆಗಿರುವ ವಿಷಯ ಈಗ 18 ವರ್ಷದ ಹಿಂದೆ ಗೊತ್ತಾಗಿದೆ ಎಂದಿದ್ದಾರೆ. ವಕೀಲರ ಮುಖಾಂತ ನೋಟೀಸ್ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ಈಗ ಗೊತ್ತಾಗಿದೆ ಎಂದಿದ್ದಾರೆ. 8 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನಿನಲ್ಲಿ ಕ್ರಯ ಆಗುವವರೆಗೂ 7 ನೇ ಪ್ರತಿವಾದಿ ಸ್ವಾಧೀನಲ್ಲಿ ಇದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲಾ ಎಂದಿದ್ದಾರೆ. 2003 ರಲ್ಲಿ 7 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಜಮೀನನ್ನು ಕ್ರಯ ಮಾಡಿರು ವ ವಿಚಾರ ನನಗೆ ಗೊತ್ತಿಲ್ಲಾ. 20 ಗುಂಟೆ ಜಮೀನಿನಲ್ಲಿ 8 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಬೇರೆಯವರಿಗೆ ಕೊಟ್ಟಿದ್ದಾರೆ ಮತ್ತು ನನಗೆ ಭಾಗ ಕೊಟ್ಟಿಲ್ಲ ಎಂದಿದ್ದಾರೆ. ವಂಶವೃಕ್ಷವನ್ನು ತಾಲ್ಲೂಕು ಕಚೇರಿಯಿಂದ ತೆಗೆದುಕೊಳ್ಳಲು ತೊಂದರೆ ಇರಲಿಲ್ಲಾ. ವಂಶವೃಕ್ಷವನ್ನು ತಯಾರಿಸಲು ನಾನೇ ಮಾಹಿತಿ ಕೊಟಿರುತ್ತೇನೆ. ನಿಪಿ-1 ನ್ನು ಸೃಷ್ಟಿ ಮಾಡಿ ದಾವೆಗೋಸ್ಕರ ಹಾಕಿದ್ದೇನೆಂದರೆ ಸರಿಯಲ್ಲಾ. ನಿಪಿ-1 ರಲ್ಲಿ ಸುಳ್ಳು ಹೇಳಿ ಬರೆಯಿಸಿದ್ದೇನೆಂದರೆ ಸರಿಯಲ್ಲಾ. ಆರ್.ಟಿ.ಸಿಗಳನ್ನು ನನ್ನ ಮದುವೆಯಾದಾಗಿನಿಂದಲೂ ತೆಗೆದುಕೊಳ್ಳುತ್ತಿದ್ದೇನೆ. ಆರ್.ಟಿ.ಸಿಯಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತು ಎಂದಿದ್ದಾರೆ. ಈಗ 25 ವರ್ಷಗಳ ಹಿಂದೆ 3 ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತೇನೆ. ಆಗಿನಿಂದಲೂ ಸಹ ಆರ್.ಟಿ.ಸಿ ತೆಗೆದುಕೊಳ್ಳುತ್ತಿದ್ದೇನೆ. ಸದರಿ ಆರ್.ಟಿ.ಸಿಗಳನ್ನು ನ್ಯಾಯಾವಾದಿಗೆ ಕೊಡಲು ತೊಂದರೆ ಇದಯಾ ಎಂದರೆ ತೊಂದರೆ ಇದೆ ಎಂದಿದ್ದಾರೆ. ನಾನು ಮದುವೆಯಾದಾಗಿನಿಂದಲೂ ಸಹ 7 ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಸರಿ. ನನ್ನ ಮದುವೆಯಾದಾಗ 7 ನೇ ಪ್ರತಿವಾದಿಗೆ ಕ್ರಯ ಆಗಿರುವ ವಿಚಾರ ಗೊತ್ತಾಗಿದೆ. ಆ ಸಮಯದಲ್ಲಿ ತಕರಾರು ಮಾಡಿದ್ದೀರಾ ಎಂದರೆ ಸಾಕ್ಷಿಯು ಅವರು ಗುತ್ತಿಗೆಗೆ ಕೊಟ್ಟಿದ್ದೇನೆಂದು ಹೇಳಿದರು ಎಂದಿದ್ದಾರೆ. ಆರ್.ಟಿ.ಸಿ ಯಲ್ಲಿ ಬಂದತಂಹ ನಮೂದುಗಳನ್ನು ಈ ದಾವೆಯನ್ನು ಹೊರೆತುಪಡಿಸಿ ಬೇರೆ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ನಾನು 3 ನೇ ಪ್ರತಿವಾದಿಯನ್ನು ಮದುವೆಯಾಗಿರುವ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆ ಹಾಜರುಪಡಿಸಿದ್ದೇನೆ. ಮದುವೆಯಾಗಿರುವ ಬಗ್ಗೆ ನಾನು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲಾ. 8 ನೇ ಪ್ರತಿವಾದಿಗೆ ಕ್ರಯ ಆಗಿರುವ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲಾ. ದಾವಾ ಸ್ವತ್ತನ್ನು

ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ. 8 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುವ ಜಮೀನಿನ ಮೇಲೆ ನಿಮಗೆ ಯಾ ವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲಾ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.